KAMD720012602023

ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಶ್ರೀರಂಗಪಟ್ಟಣ

**ಸಿ.ಸಿ.ನಂಃ 587/2023**

ದಿನಾಂಕಃ **08.04.2026**

**ಫಿರ್ಯಾದು** ಃ ಕೆ.ಆರ್.ಸಾಗರ ಪೋಲೀಸ್ ಠಾಣೆ

**ಃ ವಿ ರು ದ್ಧ ಃ**

**ಆರೋಪಿ** ಃ ಚಿಕ್ಕಣ

ಕಲಂಃ **504, 354, 323, 324** ಮತ್ತು **506** ರ ಐ.ಪಿ.ಸಿ.

ಃಃ ದೋಷಾರೋಪಣೆ ಃಃ

ನಾನು ಉಮೇಶ.ಎಮ್.ಪಿ, ಬಿ.ಎ.ಎಲ್., ಎಲ್.ಎಲ್.ಬಿ., ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಶ್ರೀರಂಗಪಟ್ಟಣ.

ಈ ಮೂಲಕ ಆರೋಪಿಯಾದ

| | |
|---|---|
| ಆರೋಪಿಃ | ಚಿಕ್ಕಣ್ಣ ಬಿನ್ ಲೇಟ್ ಕರೀಗೌಡ,<br>ವಯಸ್ಸು **50** ವರ್ಷ,<br>ವಾಸಃಹುಲಿಕೆರೆ ಗ್ರಾಮ, ಬೆಳಗೊಳ ಹೋಬಳಿ,<br>ಶ್ರೀರಂಗಪಟ್ಟಣ ತಾಲೂಕು, ಮಂಡ್ಯ ಜಿಲ್ಲೆ. |

ನಿಮ್ಮ ಮೇಲೆ ಹೊರಿಸುವ ದೋಷಾರೋಪಣೆ ಏನೆಂದರೆ ಃ-

**1.** ಮೊದಲನೇಯದಾಗಿ ದಿನಾಂಕಃ 29.08.2023 ರಂದು ಬೆಳಿಗ್ಗೆ 6-00 ಗಂಟೆ ಸಮಯದಲ್ಲಿ ಕೆ.ಆರ್.ಸಾಗರ ಪೊಲೀಸ್ ಠಾಣಾ ಸರಹದ್ದಿನ ಶ್ರೀರಂಗಪಟ್ಟಣ ತಾಲೂಕು, ಬೆಳಗೊಳ ಹೋಬಳಿಯ ಹುಲಿಕೆರೆ ಗ್ರಾಮದ ದೋ.ಸಾಕ್ಷಿ-3 ಸಿಂಗ್ರಮ್ಮ ರವರ ಕೊಟ್ಟಿಗೆಯ ಬಳಿಯ ಸಾರ್ವಜನಿಕ ರಸ್ತೆಯಲ್ಲಿ ದೋ.ಸಾಕ್ಷಿ-2 ಲೀಲಾವತಿ ಹಾಗೂ ದೋ.ಸಾಕ್ಷಿ-3 ಸಿಂಗ್ರಮ್ಮ ರವರುಗಳು ತಮ್ಮ ಕೊಟ್ಟಿಗೆಯಲ್ಲಿ ಹಸುವಿನ ಹಾಲು ಕರೆಯುತ್ತಿದ್ದಾಗ ಆರೋಪಿಯಾದ ನೀವು ದೋ.ಸಾಕ್ಷಿ-3 ಸಿಂಗ್ರಮ್ಮ ರವರ ಕೊಟ್ಟಿಗೆ ಬಳಿಯಲ್ಲಿನ ರಸ್ತೆಯಲ್ಲಿ ನಿಂತುಕೊಂಡು ದೋ.ಸಾಕ್ಷಿ-2 ಲೀಲಾವತಿ ಹಾಗೂ ದೋ.ಸಾಕ್ಷಿ-3 ಸಿಂಗ್ರಮ್ಮ ರವರುಗಳನ್ನು ಉದ್ದೇಶಿಸಿ ಸೂಳೆಮುಂಡೇರಾ, ಕತ್ತೇ ಮುಂಡೇರಾ ಎಂದು ಹಾಗೂ ದೋ.ಸಾಕ್ಷಿ-1 ಬೊಮ್ಮೇಗೌಡರವರನ್ನು ಉದ್ದೇಶಿಸಿ ಸೂಳೆಮಗನೆ, ಬೋಳಿ ಮಗನೇ ಮನೆ ನಿಮ್ಮಪ್ಪನದಾ ಎಂದು ಬಾಯಿಗೆ ಬಂದಂತೆ ಅವಾಚ್ಯ ಶಬ್ದಗಳಿಂದ ಬೈದು ಅವರನ್ನು ಅವಮಾನ ಮಾಡಿ ಆ ಮೂಲಕ ಅವರಿಗೆ ಉದ್ರೇಕವನ್ನುಂಟು ಮಾಡಿದರೆ ಅಂತಹ ಉದ್ರೇಕದಿಂದ ಅವರು ಶಾಂತಿಭಂಗವನ್ನುಂಟು ಮಾಡಲೆಂಬ ಅಥವಾ ಇತರ ಯಾವುದೇ ಅಪರಾಧವನ್ನು ಮಾಡಲೆಂಬ ಉದ್ದೇಶದಿಂದ ಅಥವಾ ಹಾಗೇ ಆಗುವ ಸಂಭವವಿದೆಯೆಂದು ತಿಳಿದು ಉದ್ದೇಶಪೂರ್ವಕ ವಾಗಿ ಅವರನ್ನು ಅವಮಾನ ಪಡಿಸಿರುತ್ತೀರಿ. ಆ

KAMD720012602023

ಮೂಲಕ ಆರೋಪಿಯಾದ ನೀವು **ಭಾ ದಂ ಸಂ ಕಲಂ.504 ರ** ಪ್ರಕಾರ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ ಎಂದೂ,

**2.** ಎರಡನೇಯದಾಗಿ ಅದೇ ದಿನ, ಅದೇ ವೇಳೆ ಮತ್ತು ಅದೇ ಸ್ಥಳದಲ್ಲಿ ಆರೋಪಿಯಾದ ನೀವು ಅವಾಚ್ಯ ಶಬ್ದಗಳಿಂದ ಬೈಯುತ್ತಿದ್ದಾಗ ದೋ.ಸಾಕ್ಷಿ-2 ಲೀಲಾವತಿ ಹಾಗೂ ದೋ.ಸಾಕ್ಷಿ-3 ಸಿಂಗ್ರಮ್ಮ ರವರು ಕೇಳಿದ್ದಕ್ಕೆ, ಆರೋಪಿಯಾದ ನೀವು ದೋ.ಸಾಕ್ಷಿ-2 ಲೀಲಾವತಿ ರವರ ತಲೆ ಮುಂದಲೆ ಹಿಡಿದು ಎಳೆದಾಡಿ ಸಾರ್ವಜನಿಕ ಸ್ಥಳದಲ್ಲಿ ಆಕೆಯ ಮಾನಕ್ಕೆ ಕುಂದುಂಟಾಗುವಂತೆ ಮಾಡಿ, ಸಾರ್ವಜನಿಕವಾಗಿ ಮಹಿಳೆಯ ಗೌರವಕ್ಕೆ ಧಕ್ಕೆ ಉಂಟು ಮಾಡುವ ರೀತಿಯಲ್ಲಿ ವರ್ತಿಸಿ ಅವಮಾನಪಡಿಸಿರುತ್ತೀರಿ. ಆ ಮೂಲಕ ಆರೋಪಿಯಾದ ನೀವು **ಭಾ ದಂ ಸಂ ಕಲಂ.354** ರ ಪ್ರಕಾರ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ ಎಂದೂ,

**3.** ಮೂರನೇಯದಾಗಿ ಅದೇ ದಿನ, ಅದೇ ವೇಳೆ ಮತ್ತು ಅದೇ ಸ್ಥಳದಲ್ಲಿಆರೋಪಿಯಾದ ನೀವು ದೋ.ಸಾಕ್ಷಿ-2 ಲೀಲಾವತಿ ರವರ ತಲೆ ಮುಂದಲೆ ಹಿಡಿದು ಎಳೆದಾಡುತ್ತಿದ್ದಾಗ ಬಿಡಿಸಲು ಬಂದ ದೋ.ಸಾಕ್ಷಿ-3 ರವರಿಗೆ ಆರೋಪಿಯಾದ ನೀವು ಕೈಯಿಂದ ತಲೆಯ ಮೇಲೆ ಹೊಡೆದಿದ್ದು ಹಾಗೂ ಜಗಳ ಬಿಡಿಸಲು ಬಂದ ದೋ.ಸಾಕ್ಷಿ-1 ಬೊಮ್ಮೇಗೌಡ ರವರಿಗೆ ಕೈಯಿಂದ ಮುಖದ ಮೇಲೆ ಹೊಡೆದು ಸಾಮಾನ್ಯ ಸ್ವರೂಪದ ನೋವುಂಟು ಮಾಡಿರುತ್ತೀರಿ. ಈ ಮೂಲಕ ಆರೋಪಿಯಾದ ನೀವು ಭಾ.ದಂ.ಸಂ.ಕಲಂ.**323** ರ ಪ್ರಕಾರ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ ಎಂದೂ,

4.ನಾಲ್ಕನೇಯದಾಗಿ ಅದೇ ದಿನ, ಅದೇ ವೇಳೆ ಮತ್ತು ಅದೇ ಸ್ಥಳದಲ್ಲಿಆರೋಪಿಯಾದ ನೀವು ಒಂದು ಬಿದಿರು ದೊಣ್ಣೆಯನ್ನು ತೆಗೆದುಕೊಂಡು ದೋ.ಸಾಕ್ಷಿ-1 ಬೊಮ್ಮೇಗೌಡರವರ ಎಡ ಕಿವಿಯ ಮೇಲೆ ಹೊಡೆದು ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿರುತ್ತೀರಿ. ಈ ಮೂಲಕ ಆರೋಪಿಯಾದ ನೀವು ಭಾ.ದಂ.ಸಂ.ಕಲಂ.**324** ರ ಪ್ರಕಾರ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ ಎಂದೂ,

**5.** ಕೊನೇಯದಾಗಿ ಅದೇ ದಿನ, ಅದೇ ವೇಳೆ ಮತ್ತು ಅದೇ ಸ್ಥಳದಲ್ಲಿ ಆರೋಪಿಯಾದ ನೀವು ದೋ.ಸಾಕ್ಷಿ-1 ಬೊಮ್ಮೇಗೌಡರವರಿಗೆ ನಿಮಗೆ ಒಂದು ಗತಿಯನ್ನುಕಾಣಿಸುತ್ತೇನೆ ಎಂದು ಜೀವ ಬೆದರಿಕೆ ಹಾಕಿದ್ದು ಇರುತ್ತದೆ. ಈ ಮೂಲಕ ಆರೋಪಿಯಾದ ನೀವುಗಳು ಭಾ.ದಂ.ಸಂ.ಕಲಂ.**506** ರ ಪ್ರಕಾರ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ ಎಂದೂ, ನಿಮ್ಮ ಮೇಲೆ ಆರೋಪ ಇದೆ.

KAMD720012602023

(ಮೇಲಿನ ಆಪಾದನೆಯನ್ನು ಆರೋಪಿಗೆ ತಿಳಿದಿರುವ ಭಾಷೆಯಲ್ಲಿ ಓದಿ ಹೇಳಿ, ಕೇಳಿ ಅವರು ಕೊಟ್ಟ ಉತ್ತರವನ್ನು ದಾಖಲಿಸಿ ಸರಿ ಇದೆ ಎಂದು ಧೃಡೀಕರಿಸುತ್ತೇನೆ).

(ಉಮೇಶ.ಎಂಪಿ.)
ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ
ನ್ಯಾಯಾಲಯ, ಶ್ರೀರಂಗಪಟ್ಟಣ.